**ಸಿ.ಸಿ.ನಂ.: 230/2025**

ಪಿ.ಡಬ್ಲ್ಯೂ: 1

(ಇಂದು ದಿನಾಂಕಃ **12-02-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಕುಮಾರಿ. ಪಿ.ಎಚ್.ಕೆ. ವಕೀಲರಿಂದ**

1. ನಾನು ಕಳೆದ 15 ವರ್ಷಗಳಿಂದ ಪ್ರಧಾನ ವ್ಯವಸ್ಥಾಪಕನಾಗಿ ಫಿರ್ಯಾದಿ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನ್ನನ್ನು ಹೊರತುಪಡಿಸಿ ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಶಾಖಾ ವ್ಯವಸ್ಥಾಪಕರು ಇದ್ದಾರೆ. ಈ ಪ್ರಕರಣದ ಸಾಲವನ್ನು ನೀಡುವ ಸಂದರ್ಭದಲ್ಲಿ ರವಿ ನಾರಾಯಣ ನಾಯ್ಕ ಇವರು ಶಾಖಾ ವ್ಯವಸ್ಥಾಪಕರು ಆಗಿದ್ದರು.

2. ಸಾಮಾನ್ಯವಾಗಿ ಸಾಲಕ್ಕಾಗಿ ಅರ್ಜಿ ಬಂದಂತಹ ಸಂದರ್ಭದಲ್ಲಿ ಸಾಲಗಾರರಿಗೆ ಆಧಾರ ಕಾರ್ಡ ಪಡಿತರ ಚೀಟಿ ಹಾಗೂ ತೇರಿಗೆ ರಶೀದಿ ಹಾಗೂ ಪಹಣಿ ಪತ್ರಿಕೆಯನ್ನು ಪಡೆದುಕೊಳ್ಳುತ್ತೇವೆ. ಸಾಲ ಮಂಜೂರಾದ ನಂತರದಲ್ಲಿ ಯಾವುದೇ ದಾಖಲಾತಿಯನ್ನು ಕೇಳುವುದಿಲ್ಲ. ಸಾಕ್ಷಿಯು ಮುಂದುವರಿದು ಭೋಜಾ ದಾಖಲಿಸಲು ಇದ್ದಲ್ಲಿ ಭೋಜಾವನ್ನು ದಾಖಲಿಸುತ್ತೇವೆ ಎಂದು ನುಡಿಯುತ್ತಾರೆ.

3. ಈ ಪ್ರಕರಣದ ಸಾಲಕ್ಕೆ ಸಂಬಂಧಿಸಿದಂತೆ ಆಡಳಿತ ಮಂಡಳಿ ಸಭೆಯು ದಿನಾಂಕಃ 27/03/2022 ರಲ್ಲಿ ನಡೆದಿರುತ್ತದೆ. ಸದ್ರಿ ಆಡಳಿತ ಮಂಡಳಿಯಲ್ಲಿ ನೀಡಿದ ಷರತ್ತುಗಳು ಸಾಲದ ಅರ್ಜಯಲಪ್ಲಿ ಇರುತ್ತದೆ ಎಂದರೆ ಸಾಕ್ಷಿಯು ಕರಾರು ಪತ್ರದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ7 ರಲ್ಲಿ ಶಿಫಾರಸ್ಸುದಾರರ ಸಹಿ ಇಲ್ಲ ಎಂದರೆ ಸಾಕ್ಷಿಯು ಶಾಖಾ ವ್ಯವಸ್ಥಾಪಕರು ಶಿಫಾರಸ್ಸಿನ ಮೇರೆಗೆ ಕೂಡ ಸಾಲವನ್ನು ನೀಡುತ್ತಾರೆ ಎಂದು ನುಡಿಯುತ್ತಾರೆ.

ಪಿ.ಡಬ್ಲ್ಯೂ: 1

4. ನಿಪಿ7 ರಲ್ಲಿ ಕೆ.ಡಿ.ಸಿ.ಸಿ. ಚೆಕ್ ನಂಬರ 040273 ಎಂದು ನಮೂದು ಇದೆ ಎಂದರೆ ಸರಿ. ಸದ್ರಿ ಚೆಕ್ ನಮ್ಮ ಬ್ಯಾಂಕಿಗೆ ಸಂಬಂಧಿಸಿದ್ದು ಇರುತ್ತದೆ. ಅದರ ಮುಖಾಂತರ ಸಾಲವನ್ನು ಪಾವತಿಸಿರುತ್ತೇವೆ ಎಂದು ನುಡಿಯುತ್ತಾರೆ. ಈ ಕುರಿತಾಗಿ ಸಾಲದ ಖಾತೆಯಲ್ಲಿ ನಮೂದು ಇರುವುದಿಲ್ಲ. ಈ ಕುತಾರಿ ನಮ್ಮ ಪಾಸ್ ಬುಕ್‌ನಲ್ಲಿ ನಮೂದು ಇರುತ್ತದೆ.

5. ನಿಪಿ9 ಲ್ಲಿ ಕ್ರೇಡಿಟ್ ಹಾಗೂ ಡೆಬಿಟ್ ಎಂಬ ಎರಡು ಕಲಂಗಳು ಇರುತ್ತವೆ ಎಂದರೆ ಸರಿ. ಅವುಗಳಲ್ಲಿ ನಾವು ಕ್ರಮಬದ್ಧವಾಗಿ ನಮೂದು ಮಾಡಬೇಕು ಎಂದರೆ ಸರಿ. ನಿಪಿ9 ರ ಕೆಳಗೆ ಬರೆದಿರುವ ಷರಾಗಳು ಈ ಪ್ರಕರಣದ ಸಾಲಕ್ಕೆ ಸಂಬಂಧಿಸಿದ್ದು ಇರುತ್ತದೆ. ಸದ್ರಿ ಹಣಗಳು ಜಮಾ ಬಂದ ಸಂದರ್ಭದಲ್ಲಿ ನಾವು ಅದನ್ನು ನಮೂದು ಮಾಡುತ್ತೇವೆ. ಸಾಲದ ವಸೂಲಾತಿ ವಿವರ ಎಂಬಲ್ಲಿ ಸದ್ರಿ ಷರಾಗಳನ್ನು ನಮೂದು ಮಾಡಬೇಕು ಎಂದರೆ ಸಾಕ್ಷಿಯು ಅವುಗಳು ಜಮಾ ಬಂದಲ್ಲಿ ಮಾತ್ರ ನಮೂದು ಮಾಡುತ್ತೇವೆ ಎಂದು ನುಡಿಯುತ್ತಾರೆ. ನಿಪಿ 9 ಕ್ರಮಬದ್ಧವಾದ ದಾಖಲೆ ಎಂದರೆ ಸರಿಯಲ್ಲ.

6. Account Statement ಗಳನ್ನು ತಯಾರಿಸಲು Silicon Software ಗಳನ್ನು ಉಪಯೋಗಿಸುತ್ತೇವೆ. ಸದ್ರಿ Software ನ್ನು ನಾವು ಕಳೇದ 1 ½ ವರ್ಷದಿಂದ ಬಸುತ್ತಿದ್ದೇವೆ. ಅದಕ್ಕಿಂತ ಪೂರ್ವದಲ್ಲಿ ಯಾವುದೇ Software ಇರಲಿಲ್ಲ. ನಿಪಿ9 Computerized ದಾಖಲಾತಿ ಅಲ್ಲ ಎಂದರೆ ಸಾಕ್ಷಿಯು ಸದ್ರಿ ದಾಖಲಾತಿಯು ಸಾಲದ ಖಾತೆಯ ರಜಿಸ್ಟರನ ಧೃಡೀಕೃತ ಪ್ರತಿ ಎಂದು ನುಡಿಯುತ್ತಾರೆ.

**ಸಿ.ಸಿ.ನಂ.: 230/2025**

ಪಿ.ಡಬ್ಲ್ಯೂ: 1

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ